ವಿಜಯ ಕರ್ನಾಟಕ
ಬುಧವಾರ, 7 ಮಾರ್ಚ್ 2018

ಕೊಡಗು ಏಕೀಕರಣ ರಂಗದ ನಿಯೋಗಕ್ಕೆ ದಿಲ್ಲಿಯಲ್ಲಿ ಕೇಂದ್ರ ಸಚಿವರ ಸ್ಪಷ್ಟನೆ। ಯೋಜನೆ ಪ್ರಸ್ತಾವಕ್ಕೆ ಅನುಮತಿ ನೀಡುವುದಿಲ್ಲ: ಭರವಸೆ

# ಕೊಡಗಿನ ಮೂಲಕ ಕೇರಳಕ್ಕೆ ರೈಲಿಲ್ಲ

■ **ವಿಕ ಸುದ್ದಿಲೋಕ** ಮಡಿಕೇರಿ

ಮೈಸೂರಿನಿಂದ ಕೊಡಗಿನ ಮೂಲಕ ಕೇರಳಕ್ಕೆ ಸಂಪರ್ಕಿಸುವ ರೈಲ್ವೆ ಮಾರ್ಗ ನಿರ್ಮಾಣ ಯೋಜನೆಯನ್ನು ಕೈಗೆತ್ತಿಕೊಳ್ಳುವುದಿಲ್ಲ ಎಂದು ಕೇಂದ್ರ ರೈಲ್ವೆ ಸಚಿವ ಪಿಯೂಷ್ ಗೋಯಲ್ ಅವರು ಸ್ಪಷ್ಟಪಡಿಸಿದ್ದು, ಕೊಡಗಿನ ಮಂದಿ ಸ್ವಾಗತಿಸಿದ್ದಾರೆ.

ಕೊಡಗು ಏಕೀಕರಣದ ನಿಯೋಗ ಹೊಸ ದಿಲ್ಲಿಗೆ ತೆರಳಿ ರೈಲ್ವೆ ಸಚಿವ ಪಿಯೂಷ್ ಗೋಯಲ್ ಅವರನ್ನು ಸೋಮವಾರ ಭೇಟಿ ಮಾಡಿ ದೀರ್ಘವಾಗಿ ಚರ್ಚೆ ನಡೆಸಿತು. ಕೊಡಗಿನ ಚಿತ್ರಣ, ಅಲ್ಲಿನ ಜನಜೀವನ, ಸೂಕ್ಷ್ಮ ಪರಿಸರ ವಲಯದಲ್ಲಿರುವುದು, ಆನೆ-ಮಾನವ ಸಂಘರ್ಷ, ಕಾಫಿ ತೋಟ, ಪಶ್ಚಿಮಘಟ್ಟ ಅರಣ್ಯ ವ್ಯಾಪ್ತಿ, ಮುಂತಾದ ವಿಷಯಗಳನ್ನು ಸಚಿವರಿಗೆ ಮನದಟ್ಟು ಮಾಡಲಾಯಿತು. ಒಂದು ವೇಳೆ ಕೊಡಗಿನ ಮೂಲಕ ರೈಲ್ವೆ ಮಾರ್ಗ ಹಾದುಹೋದಲ್ಲಿ ಅದರಿಂದ ಪ್ರಕೃತಿ ಮೇಲೆ ಆಗಬಹುದಾದ ಅಪಾಯವನ್ನು ವಿವರಿಸಿ ಹೇಳಲಾಯಿತು. ಎಲ್ಲವನ್ನೂ ತಾಳ್ಮೆಯಿಂದ ಕೇಳಿ, ಮನವಿ ಪತ್ರವನ್ನು ಕೂಲಂಕುಷವಾಗಿ ಓದಿದ ಸಚಿವರು, ಯಾವುದೇ ಕಾರಣಕ್ಕೂ ಕೊಡಗಿನ ಮೂಲಕ ಕೇರಳಕ್ಕೆ ರೈಲ್ವೆ ಮಾರ್ಗ ನಿರ್ಮಾಣ ಮಾಡಲು ಒಪ್ಪಿಗೆ ನೀಡುವುದಿಲ್ಲ ಎಂದು ಭರವಸೆ ನೀಡಿರುವುದಾಗಿ ಕೊಡಗು ಏಕೀಕರಣ ರಂಗ ತಿಳಿಸಿದೆ.



## ಕೊಡಗಿನಲ್ಲಿ ಭಾರಿ ವಿರೋಧ

ಮೈಸೂರು-ತಲಚೇರಿ ರೈಲ್ವೆ ಮಾರ್ಗ ನಿರ್ಮಾಣದ ವಿರುದ್ಧ ಕೊಡಗಿನಲ್ಲಿ ಭಾರಿ ವಿರೋಧ ವ್ಯಕ್ತವಾಗಿತ್ತು. ಎಲ್ಲ ಸಮಾಜ, ಸಂಘ ಸಂಸ್ಥೆಗಳು ಈ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿದ್ದವು. ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಗಳಲ್ಲಿಯೂ ಕೊಡಗಿನ ಮೂಲಕ ರೈಲ್ವೆ ಮಾರ್ಗ ನಿರ್ಮಾಣ ಬೇಡ ಎಂದು ಒತ್ತಾಯಿಸಲಾಗಿತ್ತು. ಆದರೂ ಕೂಡ ಕೇರಳ ಸರಕಾರ ಕೇಂದ್ರದ ಮೇಲೆ ಒತ್ತಡ ಹೇರಿದಾಗ ಕೊಡಗಿನ ಮಂದಿ ಬೀದಿಗೆ ಇಳಿದರು. ಪರಿಸರವಾದಿಗಳು, ರೈತ ಸಂಘ ಸೇರಿದಂತೆ ಹಲವು ಸಂಘ ಸಂಘಟನೆಗಳು ಬೆಂಬಲ ನೀಡಿದ್ದವು. ಕೊಡಗಿನಲ್ಲಿ ಮಾನವ ಸರಪಳಿ ರಚನೆ, ಮೆರವಣಿಗೆ, ಪ್ರತಿಭಟನೆ ನಡೆಯಿತು. ಅಲ್ಲದೇ, ಇತ್ತೀಚೆಗೆ ಮೈಸೂರಿನ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿಯೂ ಭಾರಿ ಪ್ರತಿಭಟನೆ ಕಂಡು ಬಂತು. ಪ್ರಧಾನಿ ನರೇಂದ್ರ ಮೋದಿ ಬಂದ ದಿನವೇ ಪ್ರತಿಭಟನೆ ನಡೆದ ಹಿನ್ನೆಲೆಯಲ್ಲಿ ಭಾರೀ ಸುದ್ದಿಯಾಗಿತ್ತು. ಇದೀಗ ಕೇಂದ್ರ ರೈಲ್ವೆ ಸಚಿವ ಪಿಯೂಷ್ ಗೋಯಲ್ ಅವರು ಸ್ಪಷ್ಟವಾಗಿ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಒಪ್ಪಿಗೆ ನೀಡುವುದಿಲ್ಲ ಎಂದು ಹೇಳಿದ ಹಿನ್ನೆಲೆಯಲ್ಲಿ ಹಲವು ಮಂದಿ ಸ್ವಾಗತಿಸಿದ್ದಾರೆ.

ವಿಶ್ವದಲ್ಲಿ ಅವನತಿಯಲ್ಲಿರುವ ಅಪರೂಪದ ಸುಮಾರು 329 ಮರಗಳು, ಗಿಡಮೂಲಿಕೆಗಳು, ಪ್ರಾಣಿ, ಪಕ್ಷಿ, ಕೀಟಗಳು ಪಶ್ಚಿಮಘಟ್ಟದಲ್ಲಿವೆ. ಇವುಗಳನ್ನು ರಕ್ಷಿಸಬೇಕಿದೆ. ಆದರೆ, ಇದೇ ವಲಯದಲ್ಲಿ ರೈಲ್ವೆ ಮಾರ್ಗ ನಿರ್ಮಾಣವಾದರೆ, ಭಾರಿ ಅನಾಹುತವನ್ನು ಎದುರಿಸಬೇಕಾಗುತ್ತದೆ. ಜಾಗತಿಕ ಮಟ್ಟದಲ್ಲಿ ಇಂದು ತಾಪಮಾನ ಹೆಚ್ಚಳ ಪ್ರಮುಖ ಸಮಸ್ಯೆಯಾಗಿದೆ. ಕೊಡಗಿನಂಥ ಪ್ರದೇಶದಲ್ಲಿ ರೈಲ್ವೆ ಮಾರ್ಗ ನಿರ್ಮಾಣದಿಂದ ಸಮಸ್ಯೆ ಹಾಗೂ ಆತಂಕ ಇನ್ನಷ್ಟು ಹೆಚ್ಚಾಗಲಿದೆ. ಸರಕಾರ ಈ ಕುರಿತು ಗಂಭೀರವಾಗಿ ಚಿಂತಿಸಬೇಕಿದೆ ಎಂದು ಹೇಳಿದರು.

ಒಂದು ವೇಳೆ ಕೊಡಗಿನಲ್ಲಿ ರೈಲ್ವೆ ಮಾರ್ಗ ನಿರ್ಮಾಣವಾದರೆ ಮತ್ತೆ ಪರಿಸರ ನಾಶವಾಗುತ್ತದೆ. ಈಗಾಗಲೇ ಕೆಲವು ಯೋಜನೆಗಳು ಪ್ರತಿಕೂಲ ಪರಿಣಾಮ ಬೀರಿವೆ. ಕೊಡಗಿನ ಅರಣ್ಯ ಪ್ರದೇಶ ಕಾವೇರಿ ನದಿಯ ಪ್ರಮುಖ ಜಲಮೂಲವಾಗಿದೆ. ಈ ಪ್ರದೇಶ ವಿಷ್ಯಾದ ಕಾಡಾನೆಗಳ ವಾಸಸ್ಥಳ. ಈಗಾಗಲೇ ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕೇರಳದ ನಡುವೆ ರಸ್ತೆ ಸಂಪರ್ಕ ಉತ್ತಮವಾಗಿದೆ. ಈ ಹಂತದಲ್ಲಿ ರೈಲ್ವೆ ಮಾರ್ಗ ಅನಿವಾರ್ಯವಲ್ಲ ಎಂದು ನಿಯೋಗದ ಸದಸ್ಯರು ಹೇಳಿದರು.

ದಿಲ್ಲಿಯಲ್ಲಿನ ರೈಲ್ ಭವನದಲ್ಲಿ ನಡೆದ ಮಾತುಕತೆ ಸಂದರ್ಭ ಕೊಡಗು ಏಕೀಕರಣ ರಂಗ ಹಾಗೂ ವೈಲ್ಡ್ ಲೈಫ್ ಫಸ್ಟ್ ಸಂಘಟನೆಯ ಸದಸ್ಯರೊಂದಿಗೆ ಮಾತನಾಡಿದ ಪಿಯೂಷ್ ಗೋಯಲ್, ಕೊಡಗು ಸೂಕ್ಷ್ಮ ಪರಿಸರ ವಲಯದಲ್ಲಿರುವ ಅರಿವು ಇದೆ ಎಂದು ಹೇಳಿದರು.

ಕೊಡಗಿನಲ್ಲಿ ರೈಲ್ವೆ ಮಾರ್ಗ ಅನುಷ್ಠಾನಗೊಂಡಲ್ಲಿ ಆಗಬಹುದಾದ ತೊಂದರೆ ಹಾಗೂ ಪರಿಸರದ ಮೇಲಿನ ಹಾನಿಯನ್ನು ಅಂದಾಜಿಸಿ ಕೇಂದ್ರ ಸರಕಾರ 1960ರಿಂದಲೇ ಕೊಡಗಿನಲ್ಲಿ ರೈಲ್ವೆ ಮಾರ್ಗ ನಿರ್ಮಾಣ ಪ್ರಸ್ತಾವ ತಡೆಯುತ್ತಾ ಬಂದಿದೆ. ಅದರಲ್ಲೂ ಜಲಮೂಲ ರಕ್ಷಣೆಗೆ ಕೇಂದ್ರ ಸರಕಾರ ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಜಲಮೂಲ ರಕ್ಷಣೆಯೊಂದಿಗೆ ಅತಿ ಹೆಚ್ಚು ವನ್ಯಜೀವಿಗಳಿರುವ ಈ ಪ್ರದೇಶದಲ್ಲಿ ರೈಲ್ವೆ ಮಾರ್ಗ ನಿರ್ಮಾಣದಿಂದ ತೊಂದರೆ ಆಗುವ ಸಾಧ್ಯತೆ ಇದೆ. ಒಂದು ವೇಳೆ ಈ ಭಾಗದಲ್ಲಿ ರೈಲ್ವೆ ಮಾರ್ಗ ನಿರ್ಮಾಣ ಆದಲ್ಲಿ ಈಶಾನ್ಯ ಭಾರತದಂತೆ ಆನೆಗಳ ಸಂತತಿಗೆ ಅಪಾಯವಾಗುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಮೈಸೂರು-ಕೊಡಗು-ತಲಚೇರಿ ಮಾರ್ಗಕ್ಕೆ ಅನುಮತಿ ನೀಡುವ ಪ್ರಶ್ನೆಯೇ ಇಲ್ಲ ಎಂದು ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ಕೊಡಗು ಏಕೀಕರಣ ರಂಗ ತಿಳಿಸಿದೆ.

ಖ್ಯಾತ ಪರಿಸರ ತಜ್ಞ ಹಾಗೂ ಅರಣ್ಯ ಇಲಾಖೆಯ ನಿವೃತ್ತ ಅಧಿಕಾರಿ ಕೆ.ಎಂ.ಚಿಣ್ಣಪ್ಪ, ಕೊಡಗು ಏಕೀಕರಣದ ರಂಗದ ಪ್ರಮುಖ ಎ.ಎ. ತಮ್ಮು ಪೂವಯ್ಯ, ವೈಲ್ಡ್ ಲೈಫ್ ಫಸ್ಟ್ ಸಂಘಟನೆಯ ಪ್ರವೀಣ್ ಭಾರ್ಗವ್, ಎಚ್.ಎನ್.ಎ.ಪ್ರಸಾದ್ ಅವರು ನಿಯೋಗದಲ್ಲಿದ್ದರು.

ಮೈಸೂರಿನಿಂದ ಜಿಲ್ಲೆಯ ಮೂಲಕ ಕೇರಳದ ತಲಚೇರಿಗೆ ಸಂಪರ್ಕ ಕಲ್ಪಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇರಳ ಸರಕಾರ ತೀವ್ರ ಒತ್ತಡ ಹಾಕುತ್ತಿದ್ದು, ಈ ಕುರಿತು ಹಲವು ಬಾರಿ ಮಾತುಕತೆಯಾಗಿದೆ.